ಅಹ್ಮದರು ಅಂಬೇಡ್ಕರ್ ಕುರಿತು ಉರ್ದುವಿನಲ್ಲಿ ಮಹತ್ವದ ಕೃತಿ ಸಂಪಾದಿಸಿದ್ದಾರೆ. ಇವರ ಶಾಯರಿಗಳು ಕನ್ನಡ, ಇಂಗ್ಲಿಷ್ ಭಾಷೆಗೂ ತರ್ಜುಮೆಯಾಗಿವೆ. ಛಂದೋಬಂಧದ ಇವರ ಉರ್ದು ಕೃತಿಗಳನ್ನು ಲಾಹೋರ್ ಮತ್ತು ಜರ್ಮನಿ ಪ್ರಕಾಶನ ಸಂಸ್ಥೆಗಳು ಪ್ರಕಟ ಪಡಿಸಿವೆಯೆಂದು ಹೈಕೋರ್ಟ್ ಹಿರಿಯ ವಕೀಲರಾದ ಜೆ. ಅಗಸ್ಟಿನ್ ಹೇಳುತ್ತಾರೆ. ಉರ್ದು ತ್ರಿಪದಿಗಳೇ ಪ್ರಪಂಚದ ಮೊದಲ ತ್ರಿಪದಿ ಪ್ರಕಾರಗಳೆಂದು ಬೀಗುತ್ತಿದ್ದ ಉತ್ತರದ ವಿದ್ವಾಂಸರಿಗೆ ಸವಾಲಿನ ಉತ್ತರ ಕೊಟ್ಟ ಮಂಜೂರ್, ಕನ್ನಡದ ಸರ್ವಜ್ಞ ಮತ್ತು ಆತನ ತ್ರಿಪದಿಗಳ ಕಾಲ ಕುರಿತು 'ಶಾಯರ್' ಎಂಬ ಉರ್ದು ನಿಯತಕಾಲಿಕಕ್ಕೆ ಪ್ರತಿರೋಧದ ಲೇಖನ ಬರೆದು ಕನ್ನಡದ ಸ್ವಾಭಿಮಾನ ಮೆರೆದವರು. ಹೇಳಲೇಬೇಕಾದ ಮತ್ತೊಂದು ಮಹತ್ವದ ಸಂಗತಿ ಎಂದರೆ, ಇದೇ ಸಗರನಾಡಿಗೆ ಸೇರಿದ ಹಮಿದ್ ಅಲ್ಮಾಸ್ ಅವರು ಬಸವಣ್ಣನ ವಚನಗಳನ್ನು ಉರ್ದುವಿಗೆ ಸೊಗಸಾಗಿ ತರ್ಜುಮೆ ಮಾಡಿದ್ದು, ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ದೊರಕಿವೆ.

ಈ ಕವಿಗಳ ಕಿರಿಯ ಸರೀಕರಲ್ಲಿ ಹೀರಾಲಾಲ ಜೋಶಿ, ವೆಂಕಟೇಶಗೌಡ, ಇಬ್ರಾಹಿಂ ಸಹೇರ್, ಜೋಹರ್ ತಿಮ್ಮಾಪೂರಿ, ಇಕ್ಬಾಲ್ ಅಹ್ಮದ್ ರಾಹಿ, ರಿಯಾಜ್ ಅಹ್ಮದ್ ಬೋಡೆ, ಶರಣಪ್ಪ, ಫಜಲ್ ತಿಮ್ಮಾಪುರಿ, ಅಬ್ದುಲ್ ರಬ್ ಪ್ರಮುಖರು. ತದನಂತರದ ಯುವಕವಿಗಳ ಪಡೆಯೇ ಈ ಊರಲ್ಲಿದೆ. ಶಾಮ್ ಬೆನಗಲ್ ಪ್ರಣೀತ ರಂಗಕರ್ಮಿ ಮತ್ತು ಅವತ್ತಿನ ಕಾಲದ ಕನ್ನಡ, ಹಿಂದಿ ಸಿನಿಮಾ ನಟ ಕಂ ಥಿಯೇಟರ್ ಸೆಲೆಬ್ರಿಟಿಯೇ ಆಗಿದ್ದ ಅನಿಲ್ ಠಕ್ಕರ್, ಮಂಜೂರ್ ಅಹ್ಮದ್ ತನಹಾ ಅವರ ಖಾಸಾ ದೋಸ್ತ್. ಅಂತೆಯೇ ಅನಿಲ್ ಠಕ್ಕರ್ ಮತ್ತು ಅವರ ಆಪ್ತಮಿತ್ರೆಯಂತಿದ್ದ ಅಭಿನೇತ್ರಿ ಇಂದಿರಾ ಕದಂ ಜೊತೆ ಹತ್ತಾರು ಬಾರಿ ತನಹಾ ಅವರ ಮುಲಾಖತ್ತಿನ ಮಾತುಕತೆಗಾಗಿ ತಿಮ್ಮಾಪುರಕ್ಕೆ ಬಂದಿದ್ದಾರೆ. ಬಂದಾಗೆಲ್ಲ ಮಧುಬಟ್ಟಲಿನ ಸಂತೃಪ್ತ 'ಮಧ್ಯರಾತ್ರಿ'ಗಳನ್ನು ಸಂಭ್ರಮಿಸಿದ್ದಾರೆ. ಅವು ಗಝುಲ್ ರಾತ್ರಿಯ ವಸ್ತಿಗಳು ಸಹ. ಮೂಲತಃ ಸಿಂಧ್ ಪ್ರಾಂತ್ಯದ ಅನಿಲ ಠಕ್ಕರಗೆ ಉರ್ದು ಮಾತಾಡಲು ಮಾತ್ರ ಬರುತ್ತಿತ್ತು. ಅಂತೆಯೇ ಅವರ ಅನೇಕ ಉರ್ದು ನಾಟಕಗಳಿಗೆ ಲಿಪಿಕಾರನೇ ತನಹಾ ತಿಮ್ಮಾಪೂರಿ.

ತನಹಾ ಮತ್ತು ಏಜಾಜ್ ಅವರು ದೂರದ ಮುಂಬಯಿ, ಅಲಿಗಡ್, ದಿಲ್ಲಿ ಅಲ್ಲದೇ ಲಾಹೋರ್ ಮುಂತಾದೆಡೆ ಜರುಗಿದ ಮುಶಾಯಿರಾ ಸಮ್ಮೇಳನಗಳಿಗೆ ಆಹ್ವಾನಿತ ಶಾಯರ್ ಆಗಿದ್ದಾರೆ. ಐ.ಕೆ. ಗುಜ್ರಾಲ್ ಇವರನ್ನು ಆಹ್ವಾನಿಸಿದ್ದುಂಟು. ಹಾಗೆಯೇ ಅಲ್ಲಿನ ಕವಿಗಳು ಈ ಪುಟ್ಟ ಊರು ತಿಮ್ಮಾಪುರಕ್ಕೆ ಬಂದು ಗಝುಲ್‌ಗಳನ್ನು ಒಪ್ಪಿಸಿ ಘಮ ಘಮಿಸಿದ್ದಲ್ಲದೇ ಝಗಮಗಿಸಿದ ನಿದರ್ಶನಗಳಿವೆ. ಈ ಹಿಂದೆ ಕನ್ನಡ, ಹಿಂದಿ, ಉರ್ದು ಭಾಷೆಯ ಮುಶಾಯಿರಾ ಏರ್ಪಡಿಸುತ್ತಿದ್ದರು. ಮಾಜಿ ಸಚಿವ ರಾಜಾ ಮದನಗೋಪಾಲ ನಾಯಕ ಬದುಕಿರುವಷ್ಟು ಕಾಲ ಮುಶಾಯಿರಾದ



ಸುರಪುರದ 'ಗಾಂಧಿ ವೃತ್ತ'

ಮುಖ್ಯಅತಿಥಿ ಆಗಿರುತ್ತಿದ್ದುದನ್ನು ತಿಮ್ಮಾಪುರದ ಹಿರಿಯ ಉರ್ದುಕವಿ ಇಕ್ಬಾಲ್ ಅಹ್ಮದ್ ರಾಹಿ ಇವತ್ತಿಗೂ ಸ್ಮರಿಸಿಕೊಳ್ಳುತ್ತಾರೆ.

ಇತ್ತೀಚೆಗಷ್ಟೇ 2023ರ ಜನವರಿ 10ರಂದು ತಿಮ್ಮಾಪುರದಲ್ಲಿ ಅಖಿಲ ಭಾರತ ಮಟ್ಟದ 'ಕುಲ್ ಹಿಂದ್ ಮುಶಾಯಿರಾ' (ಕವಿ ಸಮ್ಮೇಳನ) ಜರುಗಿತು. ದೆಹಲಿಯ ಕವಯತ್ರಿ ಪ್ರೊ. ಕೃಷ್ಣಾ ಶರ್ಮಾ ದಾಮಿನಿ, ಮುಂಬೈನ ಕರೀಮುದ್ದೀನ್, ಲಖನೌದ ಫರೀದ್ ಅಹ್ಮದ್ ಫರೀದ್, ಜಲಂಧರಿನ ಮಹೇಶ್ ಖೇರಾನ್ವಿ ಇವರೊಂದಿಗೆ ಹೈದರಾಬಾದ್ ಮತ್ತು ಸ್ಥಳೀಯ ಅನೇಕ ಕವಿಗಳು ಭಾಗವಹಿಸಿ ಇಡೀ ರಾತ್ರಿ ಗಝುಲ್ ಪರಿಮಳ ಹರಡಿದರು.

ಪ್ರೀತಿ, ಪ್ರೇಮ, ಪ್ರಣಯ, ವಿರಹ ಮತ್ತು ಪ್ರಾಪಂಚಿಕ ಅಸ್ತಿತ್ವದ ನಿರಸನ ದೃಷ್ಟಿಕೋನವೇ ಇವುಗಳ ಒಳಧ್ವನಿ. ಮುಖ್ಯವಾಗಿ ಗಝುಲ್ ಪ್ರಸ್ತುತಿಯ ಪಂಚಿಂಗ್ ಶೈಲಿಯೇ ಅಮೋಘ. ಅದು ಹದುಳ ಭಾವದ ದಿವ್ಯಾನುಭೂತಿ. ಬೆಳಗಿನ ಜಾವದವರೆಗೂ ಚಳಿಯನ್ನು ಲೆಕ್ಕಿಸದೇ ಚಿತ್ತವಿಟ್ಟು ಆನಂದಿಸುವ ಅಸಂಖ್ಯಾತ ಕೇಳುಗರೇ ಕವಿಗಳಿಗೆ ಮಹಾಸ್ಫೂರ್ತಿ. ಸುತ್ತಲ ಹಳ್ಳಿಗಳಿಂದಲೂ ಆಸಕ್ತರು ಬರುತ್ತಾರೆ. ರಾತ್ರಿಯೆಲ್ಲ ಚಹಾದಂಗಡಿಗಳು ಚಾಲೂ ಇರ್ತವೆ. ಕೇಳುಗರು ಮತ್ತೆ ಮತ್ತೆ ಚಹಾ ಕುಡಿದು ಬಂದು ಗಝುಲ್ ಕೇಳುತ್ತಾರೆ. ಪ್ರಭುತ್ವ ಕುರಿತು ಝುಳಪಿಸಿದ ಒಂದೆರಡು ಗಝುಲ್‌ಗಳನ್ನು ಕವಿ ಇಕ್ಬಾಲ್ ರಾಹಿ ನೆನಪಿಸಿದ್ದು ಹೀಗಿದೆ:

ತುಮ್ತೋ ಸಾರಾ ಮೈಖಾನಾ ಬೆಹ್ಕನೇ ಲಗೇ
ಯಾರೋಂ/
ಹಮ್ ಪೀಕೇ ಬತಾತೆ ಜರಾ ಜಾಮ್ ಹಮೆ
ದೇದೋ//
(ನೀವಂತೂ ಪಾನಮತ್ತರಾಗಿ
ಮಧುಶಾಲೆಯಲ್ಲೇ ತೊಯ್ದಾಡುತಿರುವಿರಿ/)
(ಕುಡಿದು ತೋರಿಸುತ್ತೇವೆ ನಶೆಯ/ ಒಂದು
ಸಲ ಮಧುಗಿಲಾಸು ಕೊಟ್ಟು ನೋಡಿ//)
ಗಾಂಧೀ ಹಮ್ ಶರ್ಮಿಂದಾ ಹೈ/
ತೇರೇ ಕಾಥಿಲ್ ಜಿಂದಾ ಹೈ//
(ನಮಗೆ ನಾಚಿಕೆಯಾಗುತ್ತಿದೆ ಗಾಂಧೀ/
ಕೊಲೆಗಡುಕರಿನ್ನೂ ಜೀವಂತವಾಗಿದ್ದಾರೆ//)

ಹಾಗೆ ನೋಡಿದರೆ ಮುಶಾಯಿರಾ ಸಡಗರ ಸುರಪುರ ಅರಸರ ಕಾಲದಿಂದಲೂ ಸಾಗಿಬಂದ ಸಾಂಸ್ಕೃತಿಕ ಸಂಭ್ರಮ. ಸೊಗಸಾಗಿ ತಬಲಾ ನುಡಿಸುತ್ತಿದ್ದ ರಾಜಾ ಪಿಡ್ಡನಾಯಕರಂತೂ ಸಾಂಸ್ಕೃತಿಕ ಸಾಮ್ರಾಟರೇ ಆಗಿದ್ದರು. ಮೂರು ವರ್ಷಗಳ ಕೆಳಗೆ ತೀರಿಹೋದ ಮಾಜಿ ಸಚಿವ ರಾಜಾ ಮದನಗೋಪಾಲ ನಾಯಕ ಸಾಂಸ್ಕೃತಿಕ ರಾಯಭಾರಿ ಅಂತಲೇ ಹೆಸರುವಾಸಿ ಆಗಿದ್ದವರು. ಕಳೆದ ಜನವರಿ 5ರಂದು ಅವರ ಪುತ್ಥಳಿ ಸುರಪುರದ ಪಬ್ಲಿಕ್ ರಿಕ್ರಿಯೇಷನ್ ಕ್ಲಬ್ ಶತಮಾನೋತ್ಸವ ಸಂದರ್ಭದಲ್ಲಿ ಅನಾವರಣಗೊಂಡಿತು.

ಇತ್ತೀಚೆಗೆ ಸುರಪುರ ಸರಹದ್ದಿನ ಸಗರನಾಡು ತುಂಬಾ ಅನೇಕರು ಗಝುಲ್ ಸಾಹಿತ್ಯ ರಚನೆಯಲ್ಲಿ ತೀವ್ರವಾಗಿ ತೊಡಗಿಸಿಕೊಂಡಿದ್ದಾರೆ. ಅವರಲ್ಲಿ ಪ್ರಮುಖವಾಗಿ ಕುತುಬುದ್ದೀನ್ ಅಮ್ಮಾಪುರ, ನಬೀಲಾಲ ಮಕಾನದಾರ, ಮಹಾಂತೇಶ ಗೋನಾಲ, ಪಾರ್ವತಿ ದೇಸಾಯಿ, ಜ್ಯೋತಿ ದೇವಣಗಾಂವ, ಸಿದ್ದರಾಮ ಹೊನ್ಕಲ್, ರಾಠೋಡ್ ಇನ್ನೂ ಅನೇಕರು ಕನ್ನಡ ಗಝುಲ್ ಕಾವ್ಯದ ಮುಂಚೂಣಿಯಲ್ಲಿದ್ದಾರೆ. ಕೆಲವರು ಮುಶಾಯಿರಾಗಳಲ್ಲೂ ಭಾಗವಹಿಸಿ ಕನ್ನಡ ಉರ್ದು ಸಾಂಗತ್ಯದ ಸಮನ್ವಯತೆ ಸಾರಿದ್ದಾರೆ.

ಇಷ್ಟೇ ಆಗಿದ್ದರೆ, ಸುರಪುರ ಸೀಮೆ ಮತ್ತದಕ್ಕೆ ತಳಕು ಹಾಕಿಕೊಂಡಿರುವ ತಿಮ್ಮಾಪುರ ಊರಿನ ಕುರಿತು ಹೆಚ್ಚುಗಾರಿಕೆ ಅನಿಸದಿರಬಹುದು. ಸುರಪುರದ ಸೀಮೆ ನೂರಾರು ಕವಿಗಳ ಆಡುಂಬೊಲ ಆಗಿರುವಂತೆ ಸಾಮಾಜಿಕವಾಗಿ ಅನೇಕ ಪ್ರಸಿದ್ಧರನ್ನು ಪಡೆದ ಪ್ರದೇಶ. ದೇಸಿವೈದ್ಯ ಅಬ್ದುಲ್ ಹಕೀಂ, ಲಕ್ಷ್ಮಣ ವಿಭೂತಿಯವರಂತಹ ಅನೇಕ ಹಕೀಮರ ಊರು ತಿಮ್ಮಾಪುರ. ಅಂತರರಾಷ್ಟ್ರೀಯ ಖ್ಯಾತಿ ಗಳಿಸಿದ ಕ್ಯಾನ್ಸರ್ ತಜ್ಞ ಡಾ. ಮಾಜಿದ್ ತಾಳಿಕೋಟಿ ಇದೇ ಊರಿನವರು. ಅವರು ಇತ್ತೀಚಿನ ರಾಷ್ಟ್ರೀಯ ಮುಶಾಯಿರಾದ ಮುಖ್ಯ ಅತಿಥಿಯಾಗಿದ್ದರು.

ಖ್ಯಾತ ಕ್ರಿಕೆಟ್ ತಾರೆ ಯುವರಾಜ್ ಸಿಂಗ್ ಮರಳಿ ಪಿಚ್‌ಗೆ ಬರಲು ಡಾ. ಮಾಜಿದ್ ತಾಳಿಕೋಟಿ ನೀಡಿದ ಚಿಕಿತ್ಸೆಯೇ ಮುಖ್ಯಕಾರಣ. ಬಾಹ್ಯಾಕಾಶ ಜಗತ್ತಿನಲ್ಲಿ ಜಗತ್ತಿನ ಗಮನ ಸೆಳೆದು ಪ್ರಧಾನಮಂತ್ರಿ ಮೋದಿಯವರಿಂದ ನೇರ ಮೆಚ್ಚುಗೆ ಪಡೆದ ಬಾಹ್ಯಾಕಾಶ ವಿಜ್ಞಾನಿ ಡಾ. ತನ್ವೀರ್ ಅಹ್ಮದ್ ಬೋಡೆ ಇದೇ ಊರಿನವರು. ಕರ್ನಾಟಕ ಉರ್ದು ಅಕಾಡೆಮಿ ಅಧ್ಯಕ್ಷೆಯಾಗಿದ್ದ ಫೌಜಿಯಾ ಬೇಗಂ ಚೌದರಿ, ಗುಲಬರ್ಗಾ ವಿ.ವಿ. ಉರ್ದು ವಿಭಾಗದ ಮುಖ್ಯಸ್ಥ ಡಾ. ಅಬ್ದುಲ್ ರಬ್, ಹೆಸರಾಂತ ನಾಲವಾರ ಶ್ರೀಮಠದ ತೋಟೇಂದ್ರ ಶ್ರೀಗಳ ಹುಟ್ಟೂರು ತಿಮ್ಮಾಪುರ. ಹೀಗೆ ಪಟ್ಟಿ ಬೆಳೆಯುತ್ತಲೇ ಸಾಗುತ್ತದೆ. ಇದು ಸುರಪುರ ಶಹರದ ಅಗಸಿ ಬಾಗಿಲಿನಂಥ ಊರು ತಿಮ್ಮಾಪುರದ ಹಿರಿಮೆ.

ಪ್ರತಿಕ್ರಿಯಿಸಿ: feedback@sudha.co.in